ಕನ್ನಡಪ್ರಭ
ಮಂಗಳವಾರ 5.05.2026

ಗರಿಷ್ಠ 36°C | ಕನಿಷ್ಠ 23°C

ಸುದ್ದಿ ಸಿಂಚನ

ಚಿತ್ರದುರ್ಗದಲ್ಲಿಂದು ವಿದ್ಯುತ್ ವ್ಯತ್ಯಯ

ಚಿತ್ರದುರ್ಗ: ಇಲ್ಲಿನ ವಿದ್ಯುತ್ ವಿತರಣಾ ಕೇಂದ್ರದಲ್ಲಿ ವಿದ್ಯುತ್ ಉಪಕರಣಗಳ ಬದಲಾಯಿಸುವ ತುರ್ತು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಚಿತ್ರದುರ್ಗ ವಿಭಾಗ ವ್ಯಾಪ್ತಿಯಲ್ಲಿರುವ 66/11 ಕೆವಿ ಚಿತ್ರದುರ್ಗ ವಿವಿ ಕೇಂದ್ರದ ಮಾರ್ಗಗಳ ನಗರ, ಎನ್ ಜೆವೈ, ವಾಟರ್‌ವರ್ಕ್ಸ್ ಮಾರ್ಗಗಳಿಗೆ ಮೇ 5ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಗಾಂಧಿ ನಗರ, ಐಯುಡಿಪಿ ಲೇಔಟ್, ಟೀಚರ್ಸ್ ಕಾಲೋನಿ, ಪ್ರಶಾಂತ್ ನಗರ, ಕೆಳಗೋಟೆ, ಆಕಾಶವಾಣಿಹಿಂಭಾಗ, ಬ್ಯಾಂಕ್‌ಕಾಲೋನಿ, ಮದಕರಿಪುರ, ಜೆಸಿಆರ್, ಚಂದ್ರವಳ್ಳಿ, ಮಾರುತಿ ನಗರ, ಮೇದೇಹಳ್ಳಿ ರಸ್ತೆ, ಬುರುಜನಹಟ್ಟಿ, ಪ್ರೈವೇಟ್ ಬಸ್ ನಿಲ್ದಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ರಾಜೇಂದ್ರಸ್ವಾಮಿ ದೇವಸ್ಥಾನ, ನೀಲಕಂಠೇಶ್ವರ ದೇವಸ್ಥಾನ, ಸಂತೆಮೈದಾನ, ಸಂತೇಹೊಂಡ, ದವಳಗಿರಿ ಬಡಾವಣೆ, ದಿ.ವಿ.ಕೆ.ಎಸ್ ಲೇಔಟ್, ಎಸ್.ಜೆ.ಎಮ್. ಕಾಲೇಜ್, ಮಾಳಪ್ಪನಹಟ್ಟಿ ರಸ್ತೆ, ಹೊಳಲ್ಕೆರೆ ಮುಖ್ಯ ರಸ್ತೆ, ಮಲ್ಲಾಪುರ, ಕನಕನಗರ, ಮಲ್ಲಾಪುರ ಗೊಲ್ಲರಹಟ್ಟಿ, ತಮಟಕಲ್ಲು, ಮೇದೇಹಳ್ಳಿ, ವಿದ್ಯಾನಗರ, ಪಿಳ್ಳೆಕೆರೆನಹಳ್ಳಿ, ಎ.ಪಿ.ಎಮ್.ಸಿ, ಫೈರ್‌ಇಂಜಿನ್ ಸ್ಟೇಷನ್, ಅಗಸನಕಲ್ಲು, ಚೋಳಗುಡ್ಡ, ನೆಹರು ನಗರ, ಮಾರುತಿ ಲೇಔಟ್ ತಾಜ್ ಪೀರ್‌ಲೇಔಟ್, ಸಿದ್ದಾರ್ಥ ಬಡಾವಣೆ, ಕಾವಡಿಗರಹಟ್ಟಿ, ದವಳಗಿರಿ 3ನೇ ಹಂತ, ಅರವಿಂದ ಗಾರ್ಮೆಂಟ್ಸ್, ಆಜಾದ್ ಫ್ಲೋರ್‌ಮಿಲ್, ರೈಲ್ವೇ ನಿಲ್ದಾಣ, ತಮಟಕಲ್ಲು ರಸ್ತೆ, ಗುಡ್ಡದರಂಗವ್ವನಹಳ್ಳಿ, ಚಿಕ್ಕಗೊಂಡನಹಳ್ಳಿ, ಮಾಡನಾಯಕನಹಳ್ಳಿ, ವಿದ್ಯಾನಗರ, ಎಸ್.ಆರ್ ಲೇಔಟ್, ಮುರುಘಾ ಮಠ, ಮಾದಾರ ಚೆನ್ನಯ್ಯ ಮಠ, ಮುರುಘರಾಜೇಂದ್ರ ನಗರ, ಮಠದ ಕುರುಬರಹಟ್ಟಿ, ಜೆಎಮ್‌ಐಟಿ ಕ್ಯಾಂಪಸ್, ವಿಶ್ವೇಶ್ವರಯ್ಯ ಬಡಾವಣೆ, ಮರುಳ ಸಿದೇಶ್ವರ ಬಡಾವಣೆ, ಶಿವ ಲೇಔಟ್, ನಿಸರ್ಗ ಬಡಾವಣೆ, ತರಳುಬಾಳ ನಗರ, ಗಾಂಧಿ ವೃತ್ತ, ಚಿಕ್ಕಪೇಟೆ, ತರಾಸು ರಂಗ ಮಂದಿರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್‌ತಿಳಿಸಿದ್ದಾರೆ.

9, 10ಕ್ಕೆ ಜಿ.ಪಲ್ಲವಿ ಪ್ರವಾಸ

ಚಿತ್ರದುರ್ಗ: ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ಅಧ್ಯಕ್ಷೆ ಜಿ.ಪಲ್ಲವಿ ಅವರು ಮೇ 9 ಮತ್ತು 10ರಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಮೇ 9ರಂದು ಸಂಜೆ 6ಕ್ಕೆ ಬೆಂಗಳೂರಿನಿಂದ ಹೊರಟು ರಾತ್ರಿ 9ಕ್ಕೆ ಹಿರಿಯೂರು ನಗರಕ್ಕೆ ಆಗಮಿಸಿ, ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು. ಮೇ 10 ರಂದು ಬೆಳಿಗ್ಗೆ 10ಕ್ಕೆ ಹಿರಿಯೂರು ನಗರದ 12ನೇ ವಾರ್ಡ್ ಮಾರಕ್ಕ ದೇವಸ್ಥಾನದ ಹತ್ತಿರ ಪರಿಶಿಷ್ಟ ಜಾತಿ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯಗಳೊಂದಿಗೆ ಕುಂದು-ಕೊರತೆ ಸಭೆ ನಡೆಸುವರು. ಮಧ್ಯಾಹ್ನ 3ಕ್ಕೆ ಹಿರಿಯೂರು ನಗರದ ತೊರೆಪಕ್ಕದ ಎಲ್ಲಮ್ಮದೇವಿ ದೇವಸ್ಥಾನಹತ್ತಿರದ ಕೊರಮರ ಕಾಲೋನಿಯಲ್ಲಿ ಪರಿಶಿಷ್ಟ ಜಾತಿ ಅಲೆಮಾರಿ ಕೊರಮ ಸಮುದಾಯಗಳೊಂದಿಗೆ ಕುಂದು-ಕೊರತೆ ಸಭೆ ನಡೆಸುವರು. ಸಂಜೆ 5ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಎಂ.ಬಿ.ಶಶಿಧರ್‌ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ: ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆಯಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅತಿಥಿ ಉಪನ್ಯಾಸಕರು/ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ. ಮೇ 15 ಅರ್ಜಿ ಸಲ್ಲಿಸಲು ಕೊನೆಯ ದಿನ.ಮೇ 19ರಂದು ಬೆಳಿಗ್ಗೆ 11 ಗಂಟೆಗೆ ಸಂದರ್ಶನವನ್ನು ಸಂಸ್ಥೆಯಲ್ಲಿ ನಡೆಸಲಾಗುವುದು. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ www.mysore.nic.in ಮತ್ತು www.cavamysore.karnataka.gov.in ಅಂತರ್ಜಾಲದ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821-2438931 ಗೆ ಸಂಪರ್ಕಿಸಬಹುದು ಎಂದು ಮೈಸೂರು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಿತ್ರದುರ್ಗ ಜಿಲ್ಲಾ ವಕೀಲರ ಸಂಘದ ವತಿಯಿಂದ ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ವರ್ಗಾವಣೆಗೊಂಡಿರುವ ರೋಣ ವಾಸುದೇವ, ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ವಿಜಯ್, ನ್ಯಾಯಾಧೀಶರಾದ ಎ.ಎಂ ಚೈತ್ರ ಹಾಗೂ ಉಜ್ವಲ್ ವೀರಣ್ಣ ಸಿದ್ದಣ್ಣನವರ್‌ಸೇರಿದಂತೆ ನಾಲ್ವರು ನ್ಯಾಯಾಧೀಶರನ್ನು ವಕೀಲರ ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು.



ತಂಬಾಕು ಕಾರ್ಯಾಚರಣೆ: 24 ಪ್ರಕರಣ ದಾಖಲು

ಚಿತ್ರದುರ್ಗ: ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ ಚಿತ್ರದುರ್ಗ ನಗರದ ವಿವಿಧೆಡೆ ತಂಬಾಕು ಕಾರ್ಯಾಚರಣೆ ನಡೆಸಲಾಯಿತು. ಒನಕೆ ಓಬವ್ವ ವೃತ್ತ, ತಾಲೂಕು ಕಚೇರಿ ಮುಂಭಾಗ ಹಾಗೂ ನಗರ ಪೊಲೀಸ್ ಠಾಣೆಯ ಹಿಂಭಾಗದಲ್ಲಿರುವ ತಂಬಾಕು ಉತ್ಪನ್ನಗಳ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿದ ತಂಡ, ನಿಯಮ ಬಾಹಿರವಾಗಿ ವ್ಯಾಪಾರ ಮಾಡುತ್ತಿದ್ದವರಿಗೆ ಬಿಸಿ ಮುಟ್ಟಿಸಿತು. ಕಾರ್ಯಾಚರಣೆಯ ವೇಳೆ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಒಟ್ಟು 24 ಪ್ರಕರಣಗಳನ್ನು ದಾಖಲಿಸಿ, 2700 ರು. ದಂಡ ವಸೂಲಿ ಮಾಡಲಾಯಿತು. ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಬಿ.ಎಂ.ಪ್ರಭುದೇವ, ಸಮಾಜ ಕಾರ್ಯಕರ್ತ ಕೆ.ಎಂ, ತಿಪ್ಪೇಸ್ವಾಮಿ, ನಗರಸಭೆಯ ಸಹಾಯಕ ಪರಿಸರ ಅಭಿಯಂತರ ಜೆ. ಜಾಫರ್‌ಸಾಬ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರುಕ್ಮಿಣಿ, ಜಯಪ್ರಕಾಶ್ ಮತ್ತು ಹಿನಾ ಕೌಸರ್ ದಾಳಿಯಲ್ಲಿ ಪಾಲ್ಗೊಂಡಿದ್ದರು.

ವಿಮಾ ಕಂಪನಿ ವಿರುದ್ಧ ಅನ್ನದಾತರ ಆಕ್ರೋಶ

ತಕ್ಷಣವೇ ಬೆಳೆ ವಿಮೆ ಪಾವತಿಸದ್ದರೆ 7ರಂದು ಜಿಲ್ಲಾಧಿಕಾರಿ ಕಚೇರಿ ಮುತ್ತಿಗೆ | ರೈತ ಸಂಘದ ಕಾರ್ಯಕರ್ತರ ಎಚ್ಚರಿಕೆ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಬೆಳೆ ವಿಮೆ ಪಾವತಿಸದ ವಿಮಾ ಕಂಪನಿ ವಿರುದ್ಧ ಸಿಡಿದೆದ್ದಿರುವ ರೈತರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ವಿಮೆ ಕಂತು ಪಾವತಿಸಿರುವ ರೈತರಿಗೆ ಇನ್ನೆರಡು ದಿನಗಳಲ್ಲಿ ವಿಮೆ ಹಣ ಬಿಡುಗಡೆ ಮಾಡದಿದ್ದರೆ ಮೇ 7 ರಂದು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ರೈತ ಸಂಘದ ಕಾರ್ಯಕರ್ತರು ಎಚ್ಚರಿಕೆ ನೀಡಿದರು.

ನಗರದ ಪ್ರವಾಸಿ ಮಂದಿರದಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸಭೆ ನಡೆಸಿ ತೀವ್ರ ಆಕ್ರೋಶ ಹೊರಹಾಕಿದರು. ಈ ವೇಳೆ ಮಾತನಾಡಿದ ರೈತ ಸಂಘದ ಹಿರಿಯ ಉಪಾಧ್ಯಕ್ಷ ಕೆ.ಪಿ.ಭೂತಯ್ಯ ಎಚ್ಚರಿಸಿದರು. ಬೆಳೆ ವಿಮೆ ಕೊಡಿಸುವ ವಿಚಾರದಲ್ಲಿ ಜಿಲ್ಲಾಡಳಿತ, ಕೃಷಿ ಇಲಾಖೆ ಅಧಿಕಾರಿಗಳು ರೈತರ ಬದುಕಿನೊಂದಿಗೆ ಚೆಲ್ಲಾಟ ಆಡುತ್ತಿದ್ದಾರೆಂದು ದೂರಿದರು.



ಬೆಳೆ ವಿಮೆ ಪಾವತಿಗೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಸೋಮವಾರ ಚಿತ್ರದುರ್ಗ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ರೈತರು ಪ್ರತಿಭಟನೆ ನಡೆಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿರುವುದನ್ನು ವಿರೋಧಿಸಿ ಮೊದಲಿ ನಿಂದಲೂ ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ. ಮಾ.3 ರಂದು ಬೆಳೆವಿಮೆ ಪಾವತಿಸುವಂತೆ ಚಳ್ಳಕೆರೆ ತಾಲೂಕು ಕಚೇರಿ ಮುಂಭಾಗದಲ್ಲಿ ಧರಣಿ ಕುಳಿತಾಗ ಜಂಟಿ ಕೃಷಿ ನಿರ್ದೇಶಕರು ಹಾಗೂ ತಹಸೀಲ್ದಾರ್‌ಅವರು ಸ್ಥಳಕ್ಕೆ ಆಗಮಿಸಿ ಬೆಳೆವಿಮೆ ಪಾವತಿಸುತ್ತೇವೆ. ಧರಣಿಯನ್ನು ಹಿಂದಕ್ಕೆ ಪಡೆಯುವಂತೆ ಮನವೊಲಿಸಿದಾಗ ಉಪವಾಸ ಸತ್ಯಾಗ್ರಹಕ್ಕೆ ಬಿಟ್ಟೆವು. ಆದರೆ ಇದುವರೆವಿಗೂ ಬೆಳೆವಿಮೆ ರೈತರ ಬ್ಯಾಂಕ್ ಖಾತೆಗಳಿಗೆ ಜಮ ಆಗಿಲ್ಲ ಎಂದು ಆರೋಪಿಸಿದರು.

ಚಳ್ಳಕೆರೆ ತಾಲೂಕಿನ ಹಿರೆಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 80 ರೈತರಿಗೆ ಓರಿಯಂಟಲ್ ವಿಮಾ ಕಂಪನಿ ಬೆಳೆ ವಿಮೆ ಪಾವತಿಸಿದ್ದು, ಜಿಲ್ಲೆಯ ಇತರೆ ರೈತರನ್ನೇಕೆ ಪರಿಗಣಿಸಿಲ್ಲ ಎಂದು ಪ್ರಶ್ನಿಸಿದ ಕೆ.ಪಿ. ಭೂತಯ್ಯ, ಇಂತಹ ತಾರತಮ್ಯ ವೆಸಗುತ್ತಿರುವ ಈ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ರೈತ ಮುಖಂಡ ಕೆ.ಸಿ.ಹೊರಕೇರಪ್ಪ ಮಾತನಾಡಿ ಪ್ರಧಾನಮಂತ್ರಿಗಳ ಫಸಲ್ ಭೀಮ ಯೋಜನೆಯಡಿ ಅನುಕೂಲವಾಗುತ್ತದೆಂದು ನಂಬಿ ಬೆಳೆ ವಿಮೆ ಕಟ್ಟಿರುವ ರೈತರಿಗೆ ವಿಮೆ ಕಂಪನಿಗಳು ಪರಿಹಾರ ಕೊಡದೆ ಮೋಸ ಮಾಡುತ್ತಿವೆ. ಸರ್ಕಾರವೇ ನೇರವಾಗಿ ಜವಾಬ್ದಾರಿ ವಹಿಸಿಕೊಳ್ಳಬೇಕು. ಜಿಲ್ಲಾಡಳಿತ ಕೃಷಿ ಇಲಾಖೆ, ಬೆಳೆ ವಿಮೆ ಕಂಪನಿಗಳು ನಿರಂತರವಾಗಿ ರೈತರಿಗೆ ಮೋಸ ಮಾಡುತ್ತಿವೆ. ಜಿಲ್ಲೆಯಾದ್ಯಂತ ಪ್ರತಿ ತಾಲೂಕಿನಲ್ಲಿಯೂ ಬೆಳೆ ವಿಮೆ ಹಣ ನೀಡುವಂತೆ ನವೆಂಬರ್‌ನಿಂದಲೂ ಹೋರಾಟ ಮಾಡುತ್ತಿದ್ದೇವೆ. ಮೂರ್ನಾಲ್ಕು ದಿನಗಳಲ್ಲಿ ಬೆಳೆ ವಿಮೆ ಪಾವತಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿಗೆ ಬೀಗ ಹಾಕಿ ಹೆದ್ದಾರಿ ಬಂದ್ ಮಾಡುವುದಾಗಿ ಗಡುವು ನೀಡಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಧನಂಜಯ ಹಂಪಯ್ಯನಮಾಳಿಗೆ ಮಾತನಾಡಿ, ಕಂತು ಪಾವತಿಸಿದರೂ ವಿಮಾ ಕಂಪನಿಗಳು ವಿಮೆ ಮೊತ್ತ ನೀಡುತ್ತಿಲ್ಲ. ಬೇಸಗೆ ಈ ದಿನಗಳಲ್ಲಿ ಜಮೀನುಗಳಿಗೆ ನೀರು ಹಾಯಿಸುವುದ ಬಿಟ್ಟು ರೈತರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ಮಾಡುವ ಪರಿಸ್ಥಿತಿ ಎದುರಾಗಿದೆ. ಉತ್ತಮ ಮಳೆಯಾದರೆ ಮುಂಗಾರು ಚಟುವಟಿಕೆ ಶುರು ವಾಗುತ್ತವೆ. ಬೆಳೆ ವಿಮೆ ಬಂದರೆ ರೈತರು ಬಿತ್ತನೆ ಬೀಜ, ರಸಗೊಬ್ಬರ ಕೊಳ್ಳಲು ಅನುಕೂಲವಾಗುತ್ತದೆ . ಮೂರ್ನಾಲ್ಕು ದಿನಗಳಲ್ಲಿ ವಿಮೆ ಮೊತ್ತ ಪಾವತಿ ಸದಿದ್ದರೆ ಹೋರಾಟ ಉಗ್ರ ರೂಪಕ್ಕೆಕೊಂಡೊಯ್ಯುವುದು ಅನಿವಾರ್ಯ ಎಂದರು ರೈತ ಸಂಘದ ಉಪಾಧ್ಯಕ್ಷ ಚಿಕ್ಕಪ್ಪನಹಳ್ಳಿ ರುದ್ರಸ್ವಾಮಿ, ಬಸ್ತಿಹಳ್ಳಿ ಜಿ.ಸುರೇಶ್‌ಬಾಬು, ತಾಲೂಕು ಅಧ್ಯಕ್ಷ ಟಿ. ಹಂಪಣ್ಣ, ಆರ್.ಚೇತನ್ ಯಳನಾಡು, ಎಂ.ಎಸ್ .ಪ್ರಭು, ಬಿ.ಓ.ಶಿವಕುಮಾರ್, ಎಂ.ಶಶಿಕಲ ಪ್ರತಿಭಟನೆ ನೇತೃತ್ವ ವಹಿಸಿದ್ದರು.

ಡಿಜಿಟಲ್ ಮಾಧ್ಯಮ ಪ್ರಭಾವದಿಂದ ಓದು ಕ್ಷೀಣ

ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ಸಾಹಿತಿ ಡಾ.ಶಿವಲಿಂಗಪ್ಪ ವಿಷಾದ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಡಿಜಿಟಲ್-ಮೊಬೈಲ್ ಮಾಧ್ಯಮದ ಪ್ರಭಾವದಿಂದ ಕುಳಿತು ಪುಸ್ತಕ ಓದುವ ಹವ್ಯಾಸ ತುಂಬಾ ವಿರಳವಾಗುತ್ತಿದೆ ಎಂದು ಸಾಹಿತಿ ಡಾ.ಸಿ.ಶಿವಲಿಗಪ್ಪ ವಿಷಾದ ವ್ಯಕ್ತಪಡಿಸಿದರು.

ನಗರದ ಪ್ರೊ.ಎಚ್.ಲಿಂಗಪ್ಪನವರ ನಿವಾಸದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಚಿತ್ರದುರ್ಗ ಜಿಲ್ಲಾ ಜಾಗೃತಿ ಸಮಿತಿ ಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಾಧಿಕಾರದ ಗ್ರಂಥಾಲಯ ಮಾಹಿತಿ ಪತ್ರವನ್ನು ಜನಾರ್ಪಣೆಗೊಳಿಸಿ ಮಾತನಾಡಿದ ಅವರು, ಕನ್ನಡ ನಾಡಿನ ಸಾಹಿತ್ಯ ಸಂಪತ್ತು ಹೇರಳವಾಗಿದ್ದು ಅದನ್ನು ಓದುವ ಅಭ್ಯಾಸ ಬೆಳಸಿಕೊಳ್ಳುವ ಮೂಲಕ ಲೇಖಕ ಹಾಗೂ ಕೃತಿಗೆ ಗೌರವ ಕೊಡುವ ಪ್ರವೃತ್ತಿ ಬೆಳಸಿಕೊಳ್ಳಬೇಕು. ಗ್ರಾಮ ಹಂತದಲ್ಲಿರುವ ಅರಿವು ಕೇಂದ್ರ ಗಳು ಈ ಮೂಲಕ ಪುನಶ್ಚೇತನ ಗೊಳ್ಳಬೇಕು. ಆಗ ಪುಸ್ತಕಗಳು ಸರಕಾಗದೆ, ಸಂಸ್ಕೃತಿ ಯಾಗಿ ಉಳಿಯುತ್ತವೆ ಎಂದರು. ಆಧುನಿಕ ಕಾಲಘಟ್ಟದಲ್ಲಿ ಓದುವ ಹವ್ಯಾಸ ಬಹಳಷ್ಟು ಕಡಿಮೆಯಾಗುತ್ತಿದೆ. ಬದುಕಿನ ತಲ್ಲಣ ಹಾಗೂ ಪಲ್ಲಟಗಳ ಮಧ್ಯ ಬೌದ್ಧಿಕ ವಿಕಾಸ ಮತ್ತು ಜ್ಞಾನಾಭಿವೃದ್ಧಿಗೆ ಪುಸ್ತಕಗಳು ಬಹು ಅಗತ್ಯವಾಗಿವೆ. ಈ ದಿಸೆಯಲ್ಲಿ ಮನೆಗೊಂದು ಗ್ರಂಥಾಲಯದ ಅನುಷ್ಠಾನ ಸಮಾರಂಭ ಅರ್ಥಪೂರ್ಣ ಹಾಗೂ ಸಾರ್ಥಕ ಕಾರ್ಯವಾಗಿದೆ ಎಂದರು. ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತ ಎಂ.ನಾರಾಯಣಸ್ವಾಮಿ ಮಾತ ನಾಡಿ, ಕೃತಿಕಾರರ ಸಂಖ್ಯೆ ಜಾಸ್ತಿಯಾಗಿ ಓದುವವರ ಸಂಖ್ಯೆ ವಿರಳವಾಗಿದೆ. ಸಾಮಾನ್ಯ ಜ್ಞಾನಕ್ಕೆ ಪುಸ್ತಕಗಳು ಹಾಗೂ ಪತ್ರಿಕೆಗಳು ತುಂಬಾ ಸಹಕಾರಿಯಾಗಿವೆ. ಉತ್ತಮ ಚಿಂತನೆ, ಭಾವನೆ, ಅಭಿವ್ಯಕ್ತಿಗಳ ಮೂಲಕ ಪರಿಣಾಮಕಾರಿಯಾದ ಸಾಹಿತ್ಯ ಹೊರಹೊಮ್ಮಿ ಶ್ರೇಷ್ಠ ಸಂಸ್ಕೃತಿ ನಿರ್ಮಾಣವಾಗಿ ಮುಂದಿನ ಪೀಳಿಗೆಯ ಬದುಕಿಗೆ ಬೆಳಕಾಗಬೇಕೆಂದರು.

ಅಧ್ಯಕ್ಷತೆವಹಿಸಿದ ಪ್ರೊ.ಎಚ್ ಲಿಂಗಪ್ಪ ಮಾತನಾಡಿ, ಸಮಾಜದ ವಸ್ತುಸ್ಥಿತಿಯನ್ನು ಅರಿತು ಅದರ ಸವಾಲುಗಳ ಪರಿಹಾರಕ್ಕೆ ಜ್ಞಾನಾರ್ಜನೆ ಮತ್ತು ಸಾಹಿತ್ಯ ಕೃಷಿ ಅತ್ಯಗತ್ಯವಾಗಿದೆ. ಆಲ್ಬರ್ಟ್ ಐನ್‌ಸ್ಟಿನ್, ಬುದ್ಧ, ಬಸವ, ಗಾಂಧೀಜಿ ಹಾಗೂ ಅಂಬೇಡ್ಕರ್‌ಅವರ ಬಹುಮುಖಿ ಚಿಂತನೆಗಳು ಕೃತಿಗಳ ಮೂಲಕ ಎಲ್ಲರ ಬದುಕಿನಲ್ಲಿ ಅನುಷ್ಠಾನಗೊಂಡಾಗ ಸಾತ್ವಿಕ ಸಮಾಜ ನಿರ್ಮಾಣವಾಗುತ್ತದೆ ಎಂದರು.

ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸಂಚಾಲಕ ನಿರಂಜನ ದೇವರಮನೆ, ಭಾಷಾ ಅನುವಾದಕ ಪ್ರೊ.ಎಂ.ಜಿ. ರಂಗಸ್ವಾಮಿ, ಚಿಂತಕ ಡಾ.ಪ್ರವೀಣ ಕುಮಾರ್, ಉಪನ್ಯಾಸಕ ಪ್ರೊ. ಚೆನ್ನಬಸಪ್ಪ, ಹಿರಿಯೂರು ಕಜಾಪ ಅಧ್ಯಕ್ಷ ರಂಗಸ್ವಾಮಿ ಸಕ್ಕರ, ಜಿಲ್ಲಾ ಮಹಿಳಾ ಲೇಖಕಿಯರ ಸಂಘದ ಅಧ್ಯಕ್ಷೆ ನಿರ್ಮಲ ಮರಡಿಹಳ್ಳಿ, ಕವಯತ್ರಿ ಗೀತಾ ಭರಮಸಾಗರ, ಜನಪದ ಕಲಾವಿದ ಗಂಜಿಗಟ್ಟೆ ಕೃಷ್ಣಮೂರ್ತಿ ಹಾಗೂ ಸಂಘಟಕ ಕೆ.ಸಿ.ರುದ್ರೇಶ್ ಇದ್ದರು.



ಕನ್ನಡ ಪುಸ್ತಕ ಪ್ರಾಧಿಕಾರದ ಚಿತ್ರದುರ್ಗ ಜಿಲ್ಲಾ ಜಾಗೃತಿ ಸಮಿತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಾಧಿಕಾರದ ಗ್ರಂಥಾಲಯ ಮಾಹಿತಿ ಪತ್ರವನ್ನು ಡಾ.ಸಿ.ಶಿವಲಿಂಗಪ್ಪ ಜನಾರ್ಪಣೆಗೊಳಿಸಿದರು. ನಿರಂಜನ ದೇವರಮನೆ, ಪ್ರೊ.ಎಂ.ಜಿ. ರಂಗಸ್ವಾಮಿ ಇದ್ದರು.

ಬಿಂದುಮಾಧವ ಶರ್ಮಾ ಸದ್ಗುರುಗಳ ಜಯಂತಿ: ಹೃದಯ ತಪಾಸಣಾ ಶಿಬಿರ



ಹೊಸದುರ್ಗ ತಾಲೂಕಿನ ಅವಧೂತ ಶ್ರೀ ಬಿಂದುಮಾಧವ ಶರ್ಮಾ ಸದ್ಗುರುಗಳ 79ನೇ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀ ಕ್ಷೇತ್ರ ಬೆಲಗೂರಿನಲ್ಲಿ ನಂಜಪ್ಪ ಲೈಫ್ ಕೇರ್‌ಹಾಗೂ ಬಿಂದುಮಾಧವ ಸೇವಾ ಟ್ರಸ್ಟ್ ಸಹಯೋಗದೊಂದಿಗೆ ಉಚಿತ ಹೃದಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಹೊಸದುರ್ಗ: ತಾಲೂಕಿನ ಅವಧೂತ ಶ್ರೀ ಬಿಂದುಮಾಧವ ಶರ್ಮಾ ಸದ್ಗುರುಗಳ 79ನೇ ಜಯಂತಿಮಹೋತ್ಸವದ ಅಂಗವಾಗಿ ಶ್ರೀಕ್ಷೇತ್ರ ಬೆಲಗೂರಿನ ಮಾನಸಮಂದಿರದಲ್ಲಿ. ನಂಜಪ್ಪ ಲೈಫ್ ಕೇರ್‌ಹಾಗೂ ಬಿಂದುಮಾಧವ ಸೇವಾ ಟ್ರಸ್ಟ್ ಸಹಯೋಗದೊಂದಿಗೆ ಉಚಿತ ಹೃದಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಈ ಶಿಬಿರದಲ್ಲಿ ಕ್ಷೇತ್ರದ ಭಕ್ತಾದಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಸೇರಿದಂತೆ ಸುಮಾರು 160ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಂಡು ತಪಾಸಣೆಗೆ ಒಳಗಾದರು. ತಜ್ಞವೈದ್ಯರ ತಂಡ ಶಿಬಿರಾರ್ಥಿಗಳಿಗೆ ಹೃದಯ ಸಂಬಂಧಿ ತಪಾಸಣೆ, ಬಿಪಿ, ಇಸಿಜಿ ಹಾಗೂ ಮಧುಮೇಹ ಪರೀಕ್ಷೆಗಳನ್ನು ನಡೆಸಿ ಸೂಕ್ತ ವೈದ್ಯಕೀಯ ಸಲಹೆಗಳನ್ನು ನೀಡಿದರು. ಇದೇ ವೇಳೆ ಮಾರುತಿ ಗುರುಪೀಠದ ವಿಜಯ ಮಾರುತಿ ಶರ್ಮ ಮಾತನಾಡಿ, ಆರೋಗ್ಯವಂತ ಸಮಾಜದ ನಿರ್ಮಾಣಕ್ಕಾಗಿ ಸದ್ಗುರುಗಳ ಆಶೀರ್ವಾದದೊಂದಿಗೆ ನಡೆಸಲಾದ ಈ ಸೇವಾ ಕಾರ್ಯವು ಸಾರ್ಥಕತೆಯನ್ನು ಕಂಡಿದೆ. ಈ ಸಂದರ್ಭದಲ್ಲಿ ಶಿಬಿರದ ಯಶಸ್ಸಿಗೆ ಕಾರಣರಾದ ನಂಜಪ್ಪ ಲೈಫ್‌ಕೇರ್‌ನ ವೈದ್ಯಕೀಯ ತಂಡಕ್ಕೆ ಹಾಗೂ ಸ್ವಯಂಸೇವಕರಿಗೆ ಟ್ರಸ್ಟ್ ಪರವಾಗಿ ಧನ್ಯವಾದಗಳು ಎಂದರು.

ಖಂಡೇನಹಳ್ಳಿ ಶಾಲೆಯ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ

ಹಿರಿಯೂರು: ತಾಲೂಕಿನ ಖಂಡೇನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ 2002ರ ಬ್ಯಾಚಿನ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ವಿವಿ ಸಾಗರದಲ್ಲಿ ಆಯೋಜಿಸಲಾಗಿತ್ತು.

24 ವರ್ಷಗಳ ನಂತರ ಶಾಲೆಯ ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ ಎರಡು ದಶಕಗಳ ತಮ್ಮ ತಮ್ಮ ಬದುಕಿನ ಅನುಭವಗಳನ್ನು ಹಂಚಿಕೊಂಡರು. ತದನಂತರ ಮೃತಪಟ್ಟಿರುವ ತಮ್ಮ ವಿದ್ಯಾರ್ಥಿ ಬದುಕಿನ ಮಿತ್ರರಾದ ಸೌಮ್ಯ, ರೂಪ, ದಾದಾಪೀರ್, ಹನುಮಂತರಾಯರವರಿಗೆ ಮೌನಾಚರಣೆ ಮಾಡುವ ಮೂಲಕ ಸಂತಾಪ ಸೂಚಿಸಲಾಯಿತು. ಆನಂತರ ಹಳೆಯ ವಿದ್ಯಾರ್ಥಿ ಪ್ಯಾರಮಿಲಿಟರಿ ಎಸ್‌ಎಸ್‌ಬಿ ಯೋಧ ಜಿ.ಶ್ರೀನಿವಾಸ್ ರವರು ತಮ್ಮೆಲ್ಲ ಸ್ನೇಹಿತರಿಗೂ ಎಸ್‌ಎಸ್‌ಬಿ ಚಿಹ್ನೆ ಇರುವ ಮೊಮೆಂಟೊಗಳನ್ನು ನೆನಪಿನ ಕೊಡುಗೆಯಾಗಿ ನೀಡಿದರು.



ಈ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳಾದ ಶಿವು ಖಂಡೇನಹಳ್ಳಿ, ಪ್ರವೀಣ್, ಬಾಬು ಜಗಜೀವನ್, ಮಂಜುನಾಥ್ ಟಿ, ಚೌದ್ರಿ ಅಲ್ತಾಫ್, ಸೋಮಶೇಖರ್, ಸತೀಶ್‌ದಳಪತಿ, ಯೋಗಾನಂದ, ಶ್ರೀನಿವಾಸಬಿ, ನರಸಿಂಹ ಮೂರ್ತಿ, ರಾಜ್ ಕುಮಾರ್, ರಮೇಶ್, ನಾಗರಾಜ್ ಎಸ್, ಚಿದಾನಂದ, ಶಿವಮೂರ್ತಿ, ಮಹಾಲಿಂಗಪ್ಪ , ಮಾರುತಿ, ಹನುಮಂತರಾಯ, ಅಂಬಾದೇವಿ, ವಿಮಲಾಕ್ಷಿ, ಮಂಜುಳ, ಶಶಿಕಲಾ, ಲತಾ, ಕವಿತ, ರೂಪ, ಪುಷ್ಪ, ದಯಾವತಿ, ಗಿರಿಜಮ್ಮ ಶಾರದ ಮುಂತಾದವರು ಉಪಸ್ಥಿತರಿದ್ದರು.

ಯುವಜನತೆಯಲ್ಲಿ ದೈಹಿಕ, ಮಾನಸಿಕ ಸ್ಥಿರತೆ ಹದಗೆಡುತ್ತಿರುವುದು ಆತಂಕಕಾರಿ

ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಶಿವಣ್ಣ



ಚಿತ್ರದುರ್ಗದಲ್ಲಿ ಆಯೋಜಿಸಿದ್ದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಜಾಗೃತಿ ಬಿತ್ತಿ ಪತ್ರ ಬಿಡುಗಡೆ ಮಾಡಲಾಯಿತು.

ಚಿತ್ರದುರ್ಗ: ದೈಹಿಕ ಆರೋಗ್ಯ ಸದೃಢವಾಗಿದ್ದರೆ ಮಾತ್ರ ಮಾನಸಿಕ ಆರೋಗ್ಯ ಚೆನ್ನಾಗಿರುತ್ತದೆ. ಆದರೆ ಇಂದಿನ ಹೈಬ್ರಿಡ್ ಜೀವನಶೈಲಿಯಿಂದಾಗಿ ಯುವಜನತೆಯಲ್ಲಿ ದೈಹಿಕ ಮತ್ತು ಮಾನಸಿಕ ಸ್ಥಿರತೆ ಹದಗೆಡುತ್ತಿರುವುದು ಆತಂಕಕಾರಿ ವಿಷಯ ಎಂದು ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಶಿವಣ್ಣ ಅಭಿಪ್ರಾಯಪಟ್ಟರು.

ಕಾಲೇಜಿನ ಯುವ ರೆಡ್ ಕ್ರಾಸ್ ಘಟಕದ ವತಿಯಿಂದ ಆಯೋಜಿಸಿದ್ದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕುರಿತ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬದಲಾದ ಆಹಾರ ಪದ್ಧತಿಯಿಂದ ಯುವತಿಯರಲ್ಲಿ ಹಾರ್ಮೋನ್ ವ್ಯತ್ಯಯ, ಅಕಾಲಿಕ ಋತುಚಕ್ರ ಹಾಗೂ ಗರ್ಭಕೋಶದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಮಾನಸಿಕ ಒತ್ತಡದ ಕಾರಣಕ್ಕೆ ಆತ್ಮಹತ್ಯೆಯಂತಹ ನಿರ್ಧಾರಗಳಿಗೆ ಯುವಜನತೆ ಮುಂದಾಗುತ್ತಿರುವುದು ವಿಷಾದನೀಯ. ಸರ್ಕಾರ ಕಾಲೇಜು ಹಂತದಲ್ಲಿ ಆಯೋಜಿಸುವ ಇಂತಹ ಅರಿವು ಕಾರ್ಯಕ್ರಮಗಳನ್ನು ವಿದ್ಯಾರ್ಥಿನಿಯರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಬಿ.ದುರ್ಗ ಪ್ರಾಥಮಿಕ ಆರೋಗ್ಯ ಕೇಂದ್ರದ ಐಸಿಟಿಸಿ ಆಪ್ತಸಮಾಲೋಚಕಿ ರೂಪಶ್ರೀ ಎನ್.ವಿಶೇಷ ಉಪನ್ಯಾಸ ನೀಡಿ, ದೈಹಿಕ ಮತ್ತು ಮಾನಸಿಕ ಆರೋಗ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹದಿಹರೆಯದಲ್ಲಿ ದೈಹಿಕ ಬದಲಾವಣೆಗಳು ಕಣ್ಣಿಗೆ ಕಂಡರೆ, ಮಾನಸಿಕ ಬದಲಾವಣೆಗಳು ಭಾವನಾತ್ಮಕ ರೂಪದಲ್ಲಿರುತ್ತವೆ. ಈ ಹಂತದಲ್ಲಿ ಉಂಟಾಗುವ ಗೊಂದಲಗಳನ್ನು ಸರಿಯಾಗಿ ಅರ್ಥೈಸಿಕೊಂಡು ಆರೋಗ್ಯಕರ ಜೀವನ ನಡೆಸಬೇಕು ಎಂದರು. ಯುವ ರೆಡ್ ಕ್ರಾಸ್ ಘಟಕದ ಸಂಚಾಲಕ ಎಸ್.ಕನಕರಾಜು ಕಾರ್ಯಕ್ರಮ ನಿರ್ವಹಿಸಿದರು. ಇಂಗ್ಲಿಷ್ ವಿಭಾಗದ ಡಾ.ಪಿ.ಎನ್. ಮಧುಸೂದನ, ಅರ್ಥಶಾಸ್ತ್ರ ವಿಭಾಗದ ಹಲಸಂದಿ ಸತೀಶ, ಸಮಾಜಶಾಸ್ತ್ರ ವಿಭಾಗದ ಡಾ.ವಿಜಯಲಕ್ಷ್ಮಿ ಆರ್, ಕನ್ನಡ ವಿಭಾಗದ ಡಾ.ಗಾಯಿತ್ರಮ್ಮ ಟಿ, ವಾಣಿಜ್ಯ ವಿಭಾಗದ ಗಿರೀಶ್ ಹಾಗೂ ಡಾ.ನಂದಿನಿ. ಟಿ ಉಪಸ್ಥಿತರಿದ್ದರು.

ಸೂರ್ಯನ ಕೆಂಗಣ್ಣು | 40 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲು | ಕಡಲೆ, ಮೆಕ್ಕೆಜೋಳ ಬೆಳೆಯ ಸಂತಾನೋತ್ಪತ್ತಿ ಹಂತಗಳಲ್ಲಿ ಉಷ್ಣ ಒತ್ತಡ

ತಾಪಮಾನ ಹೆಚ್ಚಳಕ್ಕೆ ಬಸವಳಿದ ಹಿರಿಯೂರು ಜನತೆ

• **ರಮೇಶ್ ಬಿದರಕೆರೆ**
ಕನ್ನಡಪ್ರಭ ವಾರ್ತೆ ಹಿರಿಯೂರು

ಬಿಸಿಲು ತಾಪಮಾನ ಹೆಚ್ಚಳದಿಂದ ರಸ್ತೆಗಳು ಕಾದ ಬಾಣಲೆಯಾಗುತ್ತಿದ್ದು ನಗರ ಮತ್ತು ಹಳ್ಳಿಗಳ ಕಡೆಯೂ ಜನ ಹೊರಬರಲು ಯೋಚಿಸುತ್ತಿದ್ದಾರೆ. ಮಧ್ಯಾಹ್ನ 12 ರಿಂದ ಸಂಜೆ 4 ಗಂಟೆಯವರೆಗೆ ಜನ ಸಂಚಾರದಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಪಶು ಪಕ್ಷಿಗಳು ಮರಗಳ ನೆರಳಿನ ಆಶ್ರಯ ಬಯಸುತ್ತಿವೆ. ತಾಲೂಕಿನ ಗರಿಷ್ಠ ತಾಪಮಾನ ಏಪ್ರಿಲ್ ನಲ್ಲಿ ಒಂದೆರಡು ದಿನ 40ಡಿಗ್ರಿ ಸೆಲ್ಸಿಯಸ್ ತನಕ ತಲುಪಿದ್ದು ಜನರಲ್ಲಿ ಆತಂಕ ಮೂಡಿಸಿದೆ.

ಮಾರ್ಚ್‌ನಲ್ಲಿ ಹಿರಿಯೂರು ತಾಲೂಕಿನ ಗರಿಷ್ಠ ತಾಪಮಾನ 34.9 ಡಿಗ್ರಿ ಸೆಲ್ಸಿಯಸ್ ಆಗಿದ್ದು ನಂತರದ ದಿನಗಳಲ್ಲಿ 37.4 ಡಿಗ್ರಿ ಸೆಲ್ಸಿಯಸ್ ವರೆಗೂ ತಲುಪಿತ್ತು. ಆನಂತರ ಏಪ್ರಿಲ್‌ನಲ್ಲಿ ಗಣನೀಯ ತಾಪಮಾನ ಏರಿಕೆ ಕಂಡು ಬಂದಿದ್ದು ಸರಾಸರಿ ಗರಿಷ್ಠ ತಾಪಮಾನ 38 ಡಿಗ್ರಿ ಸೆಲ್ಸಿಯಸ್ ತನಕ ತಲುಪಿತು. ಅಲ್ಲಿಗೆ ಈ ವ್ಯಾಪ್ತಿಯ ಸಾಮಾನ್ಯ ತಾಪಮಾನಕ್ಕಿಂತ 4 ಡಿಗ್ರಿ ಸೆಲ್ಸಿಯಸ್ ತಾಪಮಾನ ಹೆಚ್ಚಾಯಿತು. ಏಪ್ರಿಲ್‌ನಲ್ಲಿ ಸುಮಾರು 20 ದಿನಗಳಿಗೂ ಹೆಚ್ಚು ಕಾಲ 38 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಹಾಗಾಗಿ ವಾತಾವರಣದಲ್ಲಿ ತೀವ್ರ ಶಾಖ ಒತ್ತಡದ ಪರಿಸ್ಥಿತಿಗಳು ಕಂಡು ಬರುತ್ತಿವೆ. ಮಾರ್ಚ್‌ನಿಂದ ಏಪ್ರಿಲ್ ವರೆಗೆ ತಾಪಮಾನದಲ್ಲಿ ಸ್ಥಿರವಾದ ಏರಿಕೆ ಕಂಡು ಬಂದಿದೆ. ಇದರಿಂದಾಗಿ ಮಣ್ಣಿನ ತೇವಾಂಶದ ತ್ವರಿತ ಕ್ಷೀಣತೆ ಉಂಟಾಗಿ ತೇವಾಂಶದ ಮಟ್ಟಗಳು ನಿರ್ಣಾಯಕ ಮಿತಿಗಳಿಗಿಂತ ಕಡಿಮೆಯಾಗುವ ಸಾಧ್ಯತೆಯಿದೆ. ಮುಖ್ಯವಾಗಿ ರೈತರ ಬದುಕಿಗೆ ಹೊಡೆತ ಬೀಳುತ್ತಿದ್ದು ಕಡಲೆಕಾಯಿ, ಮೆಕ್ಕೆಜೋಳ ಮತ್ತು ದ್ವಿದಳ ಧಾನ್ಯಗಳಂತಹ ಪ್ರಮುಖ ಬೆಳೆಗಳ ಸಂತಾನೋತ್ಪತ್ತಿ ಹಂತಗಳಲ್ಲಿ ಉಷ್ಣ ಒತ್ತಡ ಕಂಡುಬರುತ್ತಿದೆ. ಇದರಿಂದಾಗಿ ಧಾನ್ಯ ತುಂಬುವಿಕೆಯ ಹಂತದಲ್ಲಿ ಶೇ.10 ರಿಂದ 20ರಷ್ಟು ಇಳುವರಿ ಕಡಿತಕ್ಕೆ ಕಾರಣವಾಗಲಿದೆ ಎನ್ನಲಾಗುತ್ತಿದೆ. ಟೊಮೊಟೊ ಮತ್ತು ಮೆಣಸಿನಕಾಯಿಯಂತಹ ತೋಟಗಾರಿಕೆ ಬೆಳೆಗಳು ಸಹ ದುರ್ಬಲವಾಗಿದ್ದು ಹೆಚ್ಚಿನ ತಾಪಮಾನ ಮತ್ತು ತೇವಾಂಶದ ಒತ್ತಡದಿಂದ ಶೇ.20 ರಿಂದ 30ರಷ್ಟು ಹೂ ಉದುರುವುದು ಮತ್ತು ಹಾನಿಯಾಗಲಿದೆ. ರೈತರು ಇಂತಹ ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಯಲ್ಲಿ ಬೆಳೆ ಉತ್ಪಾದಕತೆಯನ್ನು ಉಳಿಸಿಕೊಳ್ಳಲು ಪರಿಣಾಮಕಾರಿಯಾದ ನೀರಾವರಿ ವೇಳಾಪಟ್ಟಿ, ಹಸಿ ಗೊಬ್ಬರ ಹಾಕುವಿಕೆ ಹಾಗೂ ಶಾಖದ ಒತ್ತಡ ತಗ್ಗಿಸುವ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎನ್ನುತ್ತಾರೆ ಕೃಷಿ ಮತ್ತು ಹವಾಮಾನ ಇಲಾಖೆ ಅಧಿಕಾರಿ ಗಳು. ನಗರ ಭಾಗದಲ್ಲಿ ನೂರಾರು ಕಾಫಿ ಟೀ ಹೋಟೆಲ್‌ಗಳ ವ್ಯಾಪಾರ ಕಳೆದ ಒಂದು ತಿಂಗಳಿನಿಂದ ಕುಸಿದಿದ್ದು ಬಿಸಿಲಿನ ತಾಪಕ್ಕೆ ಜನರು ಜ್ಯೂಸ್ ಅಂಗಡಿಗಳ ತುಂಬಾ ತುಂಬಿಕೊಳ್ಳುತ್ತಿದ್ದಾರೆ.

ನಗರದ ಖ್ಯಾತ ಚರ್ಮ ವೈದ್ಯರಾದ ಡಾ.ತಿಪ್ಪೇಸ್ವಾಮಿಯವರು ಪ್ರತಿಕ್ರಿಯೆ ನೀಡಿ ದಿನೇ ದಿನೇ ತಾಪಮಾನ ಏರುತ್ತಿರುವುದರಿಂದ ಜನರಲ್ಲಿ ಅಲರ್ಜಿ ಸಂಬಂಧಿತ ಕಾಯಿಲೆಗಳು ಹೆಚ್ಚುತ್ತಿವೆ. ಅತಿಯಾದ ಬಿಸಿಲಿನಿಂದ ಸನ್ ಬರ್ನ್, ಪಿಎಲ್‌ಎ ಹಾಗೂ ಮುಖದಲ್ಲಿ ಬಟರ್ ಫ್ಲೈ ಮಾದರಿಯಲ್ಲಿ ದದ್ದುಗಳು ಕಂಡು ಬರುತ್ತವೆ. ಈ ದದ್ದು ಸೂರ್ಯನ ಶಾಖಕ್ಕೆ ಸಿಕ್ಕಾಗ ತೀವ್ರಗೊಳ್ಳುತ್ತದೆ. ಮುಖ್ಯವಾಗಿ ಅತಿಯಾದ ಸೂರ್ಯನ ತಾಪಮಾನದಿಂದ ಚರ್ಮ ಸಂಬಂಧಿತ ಕಾಯಿಲೆಗಳ ಪ್ರಮಾಣ ಹೆಚ್ಚುತ್ತದೆ ಎಂದರು.



ಹಿರಿಯೂರು ನಗರದ ಪ್ರಧಾನ ರಸ್ತೆಯಲ್ಲಿ ಬಿಸಿಲಿನ ಹೆಚ್ಚಳದಿಂದಾಗಿ ಜನ ಮತ್ತು ವಾಹನ ಸಂಚಾರ ಗಣನೀಯವಾಗಿ ಕಡಿಮೆಯಾಗಿರುವುದು.

ಸುದ್ದಿ ಸಿಂಚನ

ಇಂದು ಸಂಕಷ್ಟಹರ ಗಣಪತಿ ಪೂಜಾ ಮಹೋತ್ಸವ

ಹಿರಿಯೂರು: ನಗರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿರುವ ಶ್ರೀ ಅಂಗಾರಕ ಗಣಪತಿ ದೇವಸ್ಥಾನದಲ್ಲಿ ಮೇ 5ರ ಮಂಗಳವಾರ 29ನೇ ವರ್ಷದ ಅಂಗಾರಕ ಸಂಕಷ್ಟಹರ ಗಣಪತಿ ಪೂಜಾ ಮಹೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಕಾರ್ಯಕ್ರಮ ಸಂಯೋಜಕರು ತಿಳಿಸಿದ್ದಾರೆ. ಪೂಜಾ ಮಹೋತ್ಸವದ ಅಂಗವಾಗಿ ಗಣಪತಿ ಹೋಮ, ಗಂಗಾಪೂಜೆ, 108 ಮೋದಕ ಪೂಜೆ, ಪುಣ್ಯಾಹ, ನವಗ್ರಹ ಶಾಂತಿ, ಪಂಚ ಕಲಶಸ್ಥಾಪನೆ,ಕಥಾಶ್ರವಣ,ಮಹಾಮಂಗಳಾರತಿ,ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪೂಜಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅವರು ಮನವಿ ಮಾಡಿದ್ದಾರೆ.

ಬುದ್ಧನ ಅಷ್ಟಾಂಗ ಮಾರ್ಗಗಳು ಮನುಷ್ಯನ ಮೌಲ್ಯಗಳಾಗಬೇಕು

ಚಳ್ಳಕೆರೆ: ಬುದ್ಧನ ಅಷ್ಟಾಂಗ ಮಾರ್ಗಗಳೇ ಮನುಷ್ಯನ ಜೀವನದ ಮೌಲ್ಯಗಳಾದಾಗ ಮಾತ್ರ ಸಮಾಜದಲ್ಲಿ ಸಾಮರಸ್ಯ ನೆಲೆಯೂರಲಿದೆ ಎಂದು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಟಿ. ರಘುಮೂರ್ತಿ ಹೇಳಿದರು. ನಗರದ ತಾಲೂಕು ಕಚೇರಿಯಲ್ಲಿ ಆಯೋಜಿಸಿದ್ದ ಬುದ್ಧ ಪೂರ್ಣಿಮೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಜೀವನದಲ್ಲಿ ಬುದ್ಧ ಕಂಡಂತಹ ಸತ್ಯಗಳನ್ನು ಎಲ್ಲರೂ ಕಂಡುಕೊಳ್ಳಬೇಕಾಗಿದೆ. ಏಕೆಂದರೆ ಆಸೆಯೇ ದುಃಖಕ್ಕೆ ಮೂಲ ಕಾರಣ ಎಂದು ಹೇಳಿದವರು. ಮಹಾರಾಜನ ಮಗನಾಗಿದ್ದರೂ ಅರಮನೆಯನ್ನು ತೊರೆದು ಸತ್ಯದ ದಾರಿ ಹಿಡಿದು ನಡೆದವರು ಬುದ್ಧ. ಇಂತಹ ದಾರ್ಶನಿಕ ಬುದ್ಧನ ಮಾರ್ಗದಲ್ಲಿ ನಡೆಯಬೇಕಾಗಿದೆ ಎಂದರು. ಬುದ್ಧವೇದಿಕೆಯ ಪಿ. ದ್ಯಾಮಯ್ಯ ,ತಹಶೀಲ್ದಾರ್‌ರೇಹಾನ ಪಾಷಾ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ. ವೀರಭದ್ರಯ್ಯ, ಶಶಿಧರ್, ಗದ್ದಿಗೆ ತಿಪ್ಪೇಸ್ವಾಮಿ, ಸಿ.ಟಿ. ಶ್ರೀನಿವಾಸ್,ಮಲ್ಲಿಕಾರ್ಜುನ್,ಪ್ರಕಾಶ್,ರಾಘವೇಂದ್ರ, ಕುದಾಪುರ ತಿಪ್ಪೇಸ್ವಾಮಿ, ಪರಸಪ್ಪ, ಅನ್ವರ್‌ಮಾಸ್ಟರ್ ಸೇರಿದಂತೆ ಇನ್ನಿತರರು ಇದ್ದರು.

ಶರಣೇಂದ್ರಪ್ಪ ನಿಧನ

ಚಿತ್ರದುರ್ಗ: ನಗರದ ಮೆದೇಹಳ್ಳಿ ರಸ್ತೆ ಪಿಎಂಎಸ್ ಲೇಔಟ್ ನಿವಾಸಿ ಎಚ್.ಎಂ.ಶರಣೇಂದ್ರಪ್ಪ(95)ಅವರು



ಸೋಮವಾರ ಸಂಜೆ ನಿಧನ ಹೊಂದಿದರು. ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಎಂ. ಎಸ್.ಸೋಮಶೇಖರ್‌ಸೇರಿದಂತೆ ಮೂವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕು ಹುಲಿಕೆರೆ ಗ್ರಾಮದಲ್ಲಿ ಮಂಗಳವಾರ ನಡೆಯಲಿದೆ.

ಭದ್ರಾ ನದಿಯಲ್ಲಿ ಮುಳುಗಿ ಚಿತ್ರದುರ್ಗದ ಬಾಲಕ ಸಾವು

ಹೊಳೆಹೊನ್ನೂರು: ಪಟ್ಟಣದ ಭದ್ರಾನದಿ ಸೇತುವೆ ಬಳಿ ಕುಟುಂಬದವರು ಊಟ ಮಾಡುವಾಗ ಸ್ನಾನ ಮಾಡಲು ನದಿಗೆ ಇಳಿದಿದ್ದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ಶನಿವಾರ ನಡೆದಿದೆ.



ಮಹೊಹಿದ್ದೀನ್ (16) ಮೃತ ಬಾಲಕ. ಚಾಲಕ ವೃತ್ತಿ ಮಾಡುತ್ತಿದ್ದ ಚಿತ್ರದುರ್ಗ ಜಿಲ್ಲೆ ಪಾಮರಳ್ಳಿ ಗ್ರಾಮದ ವಾಸಿ ಇಮಾಮ್ ಸಾಬ್ ಕುಟುಂಬ ಸಮೇತ ತಮ್ಮದೆ ವಾಹನದಲ್ಲಿ ಹಣಗೆರೆಕಟ್ಟೆಗೆ ಹೊರಟಿದ್ದರು. ಮಾರ್ಗ ಮದ್ಯೆ ಊಟಕ್ಕೆಂದು ಪಟ್ಟಣದ ಭದ್ರಾ ನದಿ ಹಳೆ ಸೇತುವೆ ಕೆಳಗೆ ಇಳಿದು ನದಿ ಬಳಿ ಕುಳಿತಿದ್ದರು. ಆಗ ಮೊಹಿದ್ದೀನ್ ನೀರಿಗೆ ಇಳಿದು ಮುಳುಗುತ್ತಿದ್ದನು. ಆಗ ಸಹಾಯಕ್ಕೆ ಹೋದ ಸಹೋದರ ತಾಜುದ್ದೀನ್ ಕೂಡ ಮುಳುತ್ತಿರುವುದನ್ನು ಕಂಡ ತಂದೆ ಇಮಾಮ್ ಸಾಬ್ ಅವರು ತಾಜುದ್ದೀನ್‌ನನ್ನು ರಕ್ಷಿಸಿದ್ದಾರೆ. ಆದರೆ ಮೊಹಿದ್ದೀನ್ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ. ಸ್ಥಳೀಯರ ಸಹಕಾರ ದಿಂದ ಮೃತ ಮೊಹಿದ್ದೀನ್ ದೇಹ ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಬಳಿಕ ಸ್ವಗ್ರಾಮದಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು.
ಸ್ಥಳೀಯರ ಆಕ್ರೋಶ: ಪಟ್ಟಣದ ಭದ್ರಾ ನದಿ ಹಳೆ ಸೇತುವೆ ಸಮೀಪದಲ್ಲೆ ಅಕ್ರಮವಾಗಿ ಮರಳು ತೆಗೆದು ಅಲ್ಲಲ್ಲಿ ಗುಂಡಿ ಆಗಿರುತ್ತದೆ. ಈ ಗುಂಡಿಗಳು ನೀರಿನಲ್ಲಿ ಗೋಚರಿಸದೆ ಇಂತಹ ಅವಘಡಗಳು ನಡೆಯುತ್ತಿವೆ. ಆದ್ದರಿಂದ ಅಕ್ರಮ ಮರಳು ಗಣಿಗಾರಿಕೆಗೆ ಕಡಿವಾಣ ಹಾಕಬೇಕಿದೆ ಎಂದು ಜನರು ಆಗ್ರಹಿಸಿದ್ದಾರೆ.

ಬಿಜೆಪಿ ಗೆಲುವಿಗೆ ಚಿತ್ರದುರ್ಗದಲ್ಲಿ ಕಾರ್ಯಕರ್ತರ ಸಂಭ್ರಮಾಚರಣೆ

ಮದಕರಿನಾಯಕ ಪ್ರತಿಮೆ ಮುಂಭಾಗ ಪಟಾಕಿ ಸಿಡಿಸಿ, ಸಿಹಿ ಹಂಚಿದ ಕಾರ್ಯಕರ್ತರು

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಐದುರಾಜ್ಯಗಳಲ್ಲಿನಡೆದವಿಧಾನಸಭೆಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಗೆಲುವು ಸಾಧಿಸಿರುವುದಕ್ಕೆ ಮದಕರಿನಾಯಕ ಪ್ರತಿಮೆ ಮುಂಭಾಗದಲ್ಲಿ ಸೋಮವಾರ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು.

ಈ ವೇಳೆ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ,ಪ್ರಧಾನಿನರೇಂದ್ರಮೋದಿರವರ ಪಾರದರ್ಶಕ ಆಡಳಿತವನ್ನು ಮೆಚ್ಚಿ ಮೂರು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಮತದಾರರು ಬಿಜೆಪಿ ಯನ್ನು ಗೆಲ್ಲಿಸಿರುವುದು ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಪರಿಶ್ರಮಕ್ಕೆ ಸಿಕ್ಕ ಜಯ. ಪಶ್ಚಿಮ ಬಂಗಾಳದಲ್ಲಿ ಹಿಂದೂಗಳ ವಿರೋಧಿ ಸರ್ಕಾರಕ್ಕೆ ಬೇಸತ್ತ ಜನತೆ ಈ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿಗೆ ತಕ್ಕ ಪಾಠ ಕಲಿಸಿದ್ದಾರೆ. ಅಸ್ಸಾಂನಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಮುಖ್ಯಮಂತ್ರಿ ಹಿಮಂತ್ ಬಿಸ್ವಾರವರು ನೀಡಿರುವಜನಪರಯೋಜನೆಗಳಿಗೆಈಚುನಾವಣೆಯಲ್ಲಿ ಪ್ರತಿಫಲ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದರು.



ಮೂರು ರಾಜ್ಯಗಳಲ್ಲಿ ಬಿಜೆಪಿ ಜಯ ಸಾಧಿಸಿರುವುದಕ್ಕೆ ಚಿತ್ರದುರ್ಗದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು.

ಈ ವೇಳೆ ಮುದ್ದೇಬಿಹಾಳ ಮಾಜಿ ಶಾಸಕ ಎ.ಎಸ್.ನಡಹಳ್ಳಿ, ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಉಪಾಧ್ಯಕ್ಷೆ ಅಶ್ವಿನಿ ಶಂಕರ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ.ಸಿದ್ದಾರ್ಥ ಗುಂಡಾರ್ಪಿ, ನಗರ ಮಂಡಲ ಮಾಜಿ ಅಧ್ಯಕ್ಷ ವಿ. ಆರ್.ನಾಗರಾಜ್, ಪ್ರಧಾನ ಕಾರ್ಯದರ್ಶಿಗಳಾದ ಮಾಧುರಿ ಗಿರೀಶ್, ಜಿ.ಎಚ್.ಮೋಹನ್‌ಕುಮಾರ್, ವೆಂಕಟೇಶ್ ಯಾದವ್, ನಗರ ಮಂಡಲ ಅಧ್ಯಕ್ಷ ಲೋಕೇಶ್, ಗ್ರಾಮಾಂತರ ಮಂಡಲ ಅಧ್ಯಕ್ಷ ನಾಗರಾಜ್, ವಕ್ತಾರ ನಾಗರಾಜ್‌ಬೇದ್ರೆ, ದಗ್ಗೆ ಶಿವಪ್ರಕಾಶ್, ರಾಜ್ಯ ರೈತ ಮೋರ್ಚಾ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ್, ರಾಜೇಶ್ ಬುರುಡೆಕಟ್ಟೆ, ನಗರಸಭೆ ಮಾಜಿ ಸದಸ್ಯರುಗಳಾದ ಹರೀಶ್, ಸುರೇಶ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್, ರಜಿನಿ, ಶ್ಯಾಮಲ ಶಿವಪ್ರಕಾಶ್, ಬಸಮ್ಮ, ಶೈಲಜಾರೆಡ್ಡಿ, ಮಂಜುಳಮ್ಮ ಇನ್ನು ಮುಂತಾದವರು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಉಪಚುನಾವಣೆ ಗೆಲುವಿಗೆ ಶಾಸಕ ರಘುಮೂರ್ತಿ ಹರ್ಷ

• **ಕನ್ನಡಪ್ರಭವಾರ್ತೆ** ಚಳ್ಳಕೆರೆ



ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರಗಳ ಉಪಚುನಾವಣೆ ಗೆಲವು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ಯಶಸ್ವಿ ಆಡಳಿತಕ್ಕೆ ಸಿಕ್ಕ ಜಯ ಎಂದು ಶಾಸಕ ಹಾಗೂ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ. ರಘುಮೂರ್ತಿ ಹೇಳಿದರು.

ಗ್ಯಾರಂಟಿಗಳನ್ನು ರಾಜ್ಯದ ಜನರಿಗೆ ನೀಡುತ್ತಿರುವುದು ಸೇರಿದಂತೆ ಜನೋಪಯೋಗಿ ಕೆಲಸಗಳ ಬಗ್ಗೆ ಜನತೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಜನರ ಋಣ ತೀರಿಸುವ ಕೆಲಸ ಸರ್ಕಾರ ಮಾಡುತ್ತಿದೆ ಎಂದರು.

ಎರಡೂಕಡೆಗಳಲ್ಲಿಕಾಂಗ್ರೆಸ್‌ಅಭ್ಯರ್ಥಿಗಳು ಇದ್ದ ಕ್ಷೇತ್ರಗಳು. ಅವರ ನಿಧನದಿಂದ ತೆರವಾಗಿದ್ದ ಸ್ಥಾನಗಳಿಗೆ ಉಪಚುನಾವಣೆ ಘೋಷಣೆಯಾಗಿತ್ತು. ಪಕ್ಷದ ಎಲ್ಲಾ ಮುಖಂಡರು ಎರಡೂ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಿದ್ದಾರೆ ಎಂದರು. ಸಿದ್ಧರಾಮಯ್ಯ ನೇತೃತ್ವದಲ್ಲಿಸರ್ಕಾರಉತ್ತಮ ಕಾರ್ಯಕ್ರಮಗಳನ್ನುರಾಜ್ಯದಜನತೆಗೆಕೊಡಮಾಡುತ್ತಿದೆ. ಚುನಾವಣೆ ಸಮಯದಲ್ಲಿ ನೀಡಿದ್ದ ಭರವಸೆಗಳ ಈಡೇರಿಸುವ, ಅಂದುಕೊಂಡ ಮಾತಿಗೆ ಬದ್ಧವಾಗಿರುವ ಸರ್ಕಾರ ಜನರ ಭಾವನೆಗಳನ್ನು ಅರ್ಥಮಾಡಿಕೊಂಡು ಆಡಳಿತ ನಡೆಸುತ್ತಿದೆ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಕ್ಷೇತ್ರದಲ್ಲಿ ಸಂಚರಿಸುತ್ತಿದ್ದ ವೇಳ ಸುದ್ದಿಗಾರರೊಂದಿಗೆ ಕೆಲಹೊತ್ತು ಉಪಚುನಾವಣೆ ಫಲಿತಾಂಶದ ವಿಶ್ಲೇಷಣೆ ನಡೆಸಿದರು.

ದಾವಣಗೆರೆ, ಬಾಗಲಕೋಟೆ ಜಯಕ್ಕೆ ಕಾಂಗ್ರೆಸ್ ವಿಜಯೋತ್ಸವ

ಸಿಹಿ ಹಂಚಿ ಪಕ್ಷದ ಕಾರ್ಯಕರ್ತರಿಂದ ಸಂಭ್ರಮ



ದಾವಣಗೆರೆ, ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಜಿಲ್ಲಾ ಕಾಂಗ್ರೆಸ್‌ನಿಂದ ವಿಜಯೋತ್ಸವ ಆಚರಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ದಾವಣಗೆರೆದಕ್ಷಿಣಹಾಗೂಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಅಭ್ಯರ್ಥಿಗಳುಜಯಶಾಲಿಯಾಗಿರುವುದಕ್ಕೆ ಜಿಲ್ಲಾ ಕಾಂಗ್ರೆಸ್ ಕಚೇರಿ ಮುಂಭಾಗ ಸೋಮವಾರ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂತಸ ವಿನಿಮಯ ಮಾಡಿಕೊಳ್ಳಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್ ಪೀರ್‌ಮಾತನಾಡಿ,ರಾಜ್ಯದಮುಖ್ಯಮಂತ್ರಿ ಸಿದ್ದರಾಮಯ್ಯನವರ ಪಂಚ ಗ್ಯಾರಂಟಿ ಯೋಜನೆಗಳು, ಕಾರ್ಯಕರ್ತರ ನಿಷ್ಠೆ ಹಾಗೂ ಮತದಾರರು ಕಾಂಗ್ರೆಸ್ ಪಕ್ಷದ ಮೇಲೆನಂಬಿಕೆವಿಶ್ವಾಸವಿಟ್ಟುಮತಚಲಾಯಿಸಿದ್ದರ ಪರಿಣಾಮ ಎರಡು ಕಡೆ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಲು ಕಾರಣವಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮುನಿರಾ ಎ. ಮಕಾಂದಾರ್‌ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ಪಕ್ಷದ ನಾಯಕರೊಂದಿಗೆ ದಾವಣಗೆರೆಯಲ್ಲಿ ಮನೆ ಮನೆಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಪರ ಮತ ಯಾಚಿಸಿದ್ದೇವೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಮತದಾರರು.

ಡಾ.ಶಾಮನೂರು ಶಿವಶಂಕರಪ್ಪನವರ ಕುಟುಂಬದಮೇಲೆಅಪಾರಅಭಿಮಾನಿವಿಟ್ಟು ಅವರ ಮೊಮ್ಮಗನನ್ನು ಗೆಲ್ಲಿಸಿದ್ದಾರೆ. ಅದೇ ರೀತಿ ಬಾಗಲಕೋಟೆಯಲ್ಲಿಯೂಕಾಂಗ್ರೆಸ್ ಅಭ್ಯರ್ಥಿ ಗೆಲುವು ಪಕ್ಷಕ್ಕೆ ಶಕ್ತಿ ತುಂಬಿದಂತಾಗಿದೆ ಎಂದು ಹೇಳಿದರು.

ಜಿಲ್ಲಾಕಾಂಗ್ರೆಸ್‌ಗ್ಯಾರಂಟಿಅನುಷ್ಠಾನಗಳ ಸಮಿತಿ ಅಧ್ಯಕ್ಷ ಆರ್.ಶಿವಣ್ಣ, ಉಪಾಧ್ಯಕ್ಷ ಡಿ.ಎನ್.ಮೈಲಾರಪ್ಪ, ಪ್ರಧಾನ ಕಾರ್ಯದರ್ಶಿ ಕೆ.ಪಿ.ಸಂಪತ್‌ಕುಮಾರ್, ಕರ್ನಾಟಕ ರಾಜ್ಯ ಟಿಪ್ಪುಸುಲ್ತಾನ್ ಅಭಿಮಾನಿಗಳ ಮಹಾವೇದಿಕೆ ರಾಜ್ಯಾಧ್ಯಕ್ಷ ಟಿಪ್ಪುಖಾಸಿಂ ಆಲಿ, ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎನ್.ಡಿ.ಕುಮಾರ್, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಸೈಯದ್ ಮೊಹಿದ್ದೀನ್(ಚೋಟು) ಪದವೀಧರ ವಿಭಾಗದ ಅಧ್ಯಕ್ಷ ಮುದಸಿರ್‌ನವಾಜ್, ಇಂಟೆಕ್‌ವಿಭಾಗದಮಾಜಿಅಧ್ಯಕ್ಷಸೈಯದ್ ಸೈಫುಲ್ಲಾ, ಕರುನಾಡ ರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಸೈಯದ್ ಇಸ್ಮಾಯಿಲ್, ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರೇಣುಕಾಶಿವು ಇದ್ದರು.

ಮೂರು ರಾಜ್ಯಗಳಲ್ಲಿ ಬಿಜೆಪಿಗೆ ಜಯ: ಕಾರ್ಯಕರ್ತರ ಸಂಭ್ರಮ



ಮೂರು ರಾಜ್ಯಗಳ ಬಿಜೆಪಿ ಗೆಲುವಿನ ಹಿನ್ನೆಲೆಯಲ್ಲಿ ಮೊಳಕಾಲ್ಮೂರಲ್ಲಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

• **ಕನ್ನಡಪ್ರಭ ವಾರ್ತೆ** ಮೊಳಕಾಲ್ಮೂರು

ಮೂರು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿರುವಹಿನ್ನೆಲೆಯಲ್ಲಿಮೊಳಕಾಲ್ಮೂರುಪಟ್ಟಣದಲ್ಲಿಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ಇಲ್ಲಿನ ಬಸ್ ನಿಲ್ದಾಣದಲ್ಲಿಸೋಮವಾರ ನಡೆದ ಸಂಭ್ರಮಾಚರಣೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಹರ್ಷ ವ್ಯಕ್ತಪಡಿಸಿಪ್ರಧಾನಿ ಮೋದಿ, ಗೃಹಸಚಿವಅಮಿತ್ ಶಾ, ನಿತಿನ್ ನಬಿ ಅವರಿಗೆ ಜೈ ಘೋಷಣೆಗಳು ಕೂಗಿದರು.

ಜಿಲ್ಲಾಪ್ರಧಾನ ಕಾರ್ಯದರ್ಶಿ ಡಾ.ಪಿ.ಎಂ.ಮಂಜುನಾಥ್ ಮಾತನಾಡಿ, ಪಂಚರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ಸೇರಿ ಮೂರು ರಾಜ್ಯಗಳಲ್ಲಿಬಿಜೆಪಿಅಭೂತಪೂರ್ವಗೆಲುವುಸಾಧಿಸಿಆಡಳಿತಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದೆ. ನರೇಂದ್ರ ಮೋದಿಯವರ ಅಭಿವೃದ್ಧಿಯನ್ನು ಮೆಚ್ಚಿ ದೇಶದ ಜನತೆ ಬಿಜೆಪಿಯನ್ನು ಕೈ ಹಿಡಿದಿದ್ದಾರೆ.ಈಗೆಲುವಿಂದಾಗಿಪಕ್ಷಗಟ್ಟಿಯಾಗಿದೆಎನ್ನುವುದನ್ನು ಸಾಬೀತುಪಡಿಸಿದೆ.ಇದುಮೋದಿಯವರಕ್ಕೆಬಲಪಡಿಸಿದಂತಾಗಿದೆ ದೇಶ ಇನ್ನಷ್ಟು ಅಭಿವೃದ್ಧಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಮಂಡಲದ ಅಧ್ಯಕ್ಷ ಶ್ರೀರಾಮರೆಡ್ಡಿ, ಪಕ್ಷದ ಹಿರಿಯ ಮುಖಂಡರಾದ ಡಿ.ಎಂ.ಈಶ್ವರಪ್ಪ, ಟಿ.ಟಿ. ರವಿ, ಸಿದ್ದಣ್ಣ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಲಕ್ಷ್ಮಣ, ಉಪಾಧ್ಯಕ್ಷ ತಿಪ್ಪೇಸ್ವಾಮಿ, ಭೀಮಣ್ಣ, ಮಂಜಣ್ಣ, ಡಿಶ್ ರಾಜು, ಪ್ರಧಾನ ಕಾರ್ಯದರ್ಶಿಗಳಾದ ನೇರ್ಲಹಳ್ಳಿ ಪ್ರಭಾಕರ ಹರೀಶ್ ಕಡೆತೋಟ, ರಮೇಶ್ ದಳವಾಯಿ, ಮಂಜು, ನಾಗರಾಜ್, ಜಿ.ಎಲ್.ತಿಪ್ಪೇಸ್ವಾಮಿ, ಮರಿಸ್ವಾಮಿ, ಕುಮಾರ್‌ಸ್ವಾಮಿ, ರಾಮಾಂಜನೇಯ, ಹರೀಶ್ ಪಾಳೇಗಾರ, ಸಾಗರ್, ಬಸವರಾಜ್, ಚಿತ್ತಯ್ಯ ಇದ್ದರು.

ಸಾಣೇಹಳ್ಳಿಯಲ್ಲಿ 17ರಿಂದ ಯುವಜನ ಶೈಕ್ಷಣಿಕ ರಂಗ ಶಿಬಿರ: ಅರ್ಜಿ ಆಹ್ವಾನ

ಹೊಸ ತಲೆಮಾರಿಗೆ 20 ದಿನಗಳ ವಸತಿ ಸಹಿತ ರಂಗ ಶಿಕ್ಷಣ ಆಯೋಜನೆ

• **ಕನ್ನಡಪ್ರಭ ವಾರ್ತೆ** ಹೊಸದುರ್ಗ

ತಾಲೂಕಿನಸಾಣೇಹಳ್ಳಿಯಶ್ರೀ ಶಿವಕುಮಾರ ರಂಗ ಪ್ರಯೋಗ ಶಾಲೆ, ಶ್ರೀ ಶಿವಕುಮಾರ ಕಲಾಸಂಘ (ರಿ) ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರ ಸಹಯೋಗದೊಂದಿಗೆಮೇ17ರಿಂದಜೂನ್ 5 ರವರೆಗೆ ಯುವಜನ ಶೈಕ್ಷಣಿಕ ರಂಗ ಶಿಬಿರ ಹೊಸ ತಲೆಮಾರಿಗೆ 20 ದಿನಗಳ ವಸತಿ ಸಹಿತ ರಂಗ ಶಿಕ್ಷಣವನ್ನು ಆಯೋಜಿಸಲಾಗಿದೆ.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಕಳೆದ 18 ವರ್ಷಗಳಿಂದ ರಂಗಶಿಕ್ಷಣ ನೀಡುತ್ತಾ ಬಂದಿರುವ ಈ ಸಂಸ್ಥೆಯು, ರಂಗಾಸಕ್ತ ಯುವಜನತೆಗಾಗಿ ಈ ವಿಶೇಷ ಶಿಬಿರವನ್ನು ಹಮ್ಮಿಕೊಂಡಿದೆ.

ಶಿಬಿರದಲ್ಲಿ ನಟನೆ, ಸಂವಹನ ಕೌಶಲ್ಯ, ರಂಗವಿನ್ಯಾಸದಪ್ರಾಯೋಗಿಕಜ್ಞಾನ,ವ್ಯಕ್ತಿತ್ವ ವಿಕಸನ ಹಾಗೂ ಸಾಮಾಜಿಕ ತಿಳುವಳಿಕೆ ಬಗ್ಗೆ ನುರಿತ ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರಿಂದ ತರಬೇತಿ ಹಾಗೂ ಖ್ಯಾತ ನಿರ್ದೇಶಕರಿಂದ ನಾಟಕ ಪ್ರಯೋಗ



ನಡೆಸಲಾಗುವುದು ಅಲ್ಲದೆ ಶಿಬಿರಾರ್ಥಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ.

ಪ್ರವೇಶಾತಿಗೆ ವಯೋಮಿತಿ 18 ರಿಂದ 32 ವರ್ಷದೊಳಗಿರಬೇಕು. ಕನಿಷ್ಟ ಎಸ್‌ಎಸ್‌ಎಲ್‌ಸಿ ಅಥವಾ ಪಿಯುಸಿ ತೇರ್ಗಡೆಯಾಗಿರಬೇಕು. ರಂಗಭೂಮಿ ಅನುಭವವಿರುವ ಕಲಾವಿದರು ಹಾಗೂ ಪದವಿ/ಸ್ನಾತಕೋತ್ತರ ಪದವಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಪ್ರವೇಶ ಶುಲ್ಕ 500 ರು ಇದ್ದು ಆಸಕ್ತರು ಅರ್ಜಿಗಳನ್ನು ಆನ್‌ಲೈನ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಪೋಸ್ಟ್ ಅಥವಾ ವಾಟ್ಸಾಪ್ ಮೂಲಕ ಕಳುಹಿಸಲು ಮೇ 15ರೊಳಗೆ ಪ್ರಾಂಶುಪಾಲರು, ಶ್ರೀ ಶಿವಕುಮಾರ ರಂಗ ಪ್ರಯೋಗ ಶಾಲೆ ಸಾಣೇಹಳ್ಳಿ, ಹೊಸದುರ್ಗ ತಾಲೂಕು, ಚಿತ್ರದುರ್ಗ ಜಿಲ್ಲೆ-577515 ಇಲ್ಲಿಗೆ ಕಳಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9880872740, 9448398144, 9480282791 ವೆಬ್‌ಸೈಟ್ : https://theatreschoolsanehalli.in ರಲ್ಲಿ ಪಡೆಯಬಹುದಾಗಿದೆ.

ಹೊಸಬರಿಗೆ ರಂಗಭೂಮಿಯ ಪ್ರವೇಶಕ್ಕೆ ಹಾಗೂ ಅನುಭವವಿರುವವರಿಗೆ ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಇದು ಉತ್ತಮ ಅವಕಾಶ ಎಂದು ಶಾಲೆಯ ಪ್ರಾಂಶುಪಾಲ ರಾಘು ಪುರಪ್ಪೆಮನೆ ಹಾಗೂ ಡಾ.ಟಿ.ಎಚ್. ಲವಕುಮಾರ ಸದಸ್ಯ ಸಂಚಾಲಕರು ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರಚಿಕ್ಕಣ್ಣ ದೇವರ ನೂತನ ದೇವಸ್ಥಾನ ಉದ್ಘಾಟನೆ


• **ಕನ್ನಡಪ್ರಭ ವಾರ್ತೆ** ಚಳ್ಳಕೆರೆ

ದೇಗುಲಗಳು ಜನರ ನಂಬಿಕೆಗಳನ್ನು ಜೀವಂತವಾಗಿಡುವ ಆರಾಧನಾ ಕೇಂದ್ರಗಳು. ಇಂತಹ ದೇವರುಗಳಿಂದಲೇಜನರಲ್ಲಿಭಕ್ತಿ ಭಾವಇನ್ನೂಜೀವಂತವಾಗಿದೆಎಂದುಚಳ್ಳಕೆರೆವಿಧಾನಸಭಾ ಕ್ಷೇತ್ರದ ಶಾಸಕರಾದ ಟಿ.ರಘುಮೂರ್ತಿ ಹೇಳಿದರು.

ಚಳ್ಳಕೆರೆತಾಲೂಕಿನ ಹೊಟ್ಟೆಪ್ಪನಹಳ್ಳಿ ನಂದಾಪುರ ಗ್ರಾಮದಲ್ಲಿ ನಡೆದ ವೀರಚಿಕ್ಕಣ್ಣ ದೇವರ ನೂತನ ದೇವಸ್ಥಾನದ ಉದ್ಘಾಟನೆ ಮತ್ತು ಕಳಸ ಪ್ರತಿಷ್ಠಾಪನಾ ಸಮಾರಂಭದಲ್ಲಿ ಪಾಲ್ಗೊಂಡು ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.

ಅನಾದಿಕಾಲದಿಂದಲೂ ಗ್ರಾಮೀಣ ಪ್ರದೇಶದಲ್ಲಿ ದೇವರುಗಳ ಸೇವಾ ಕೈಂಕರ್ಯಗಳನ್ನು ನೋಡುತ್ತಾ ಬಂದವರು. ಮುಂದಿನ ಪೀಳಿಗೆಗೂ ಇಂತಹ ಆಚರಣೆಗಳು ಮುಂದುವರೆಯುತ್ತಿರುವುದು ಸಂಬಂಧಗಳು ಗಟ್ಟಿಗೊಳ್ಳುವಂತೆ ಮಾಡಲಿವೆ ಎಂದರು.

ಇದೇಸಂದರ್ಭದಲ್ಲಿಶಾಸಕರನ್ನುದೇವಸ್ಥಾನದಅಣ್ಣತಮ್ಮಂದಿರುಗೌರವಿಸಿಸನ್ಮಾನಿಸಿದರು. ಈಸಂದರ್ಭದಲ್ಲಿಪರಶುರಾಂಪುರಬ್ಲಾಕ್‌ಕಾಂಗ್ರೆಸ್‌ಅಧ್ಯಕ್ಷರಾದಶಶಿಧರ,ಮುಖಂಡರಾದ ಮಂಜುನಾಥ್, ಗಟ್ಟೆಪ್ಪ, ನಾಗರಾಜ್, ಮಹೇಶ್, ಮುಖಂಡರು ಹಾಜರಿದ್ದರು.



ಸಿದ್ದರಾಮಯ್ಯ ಆಡಳಿತದ ಹಿರಿಮೆಗೆ ಗರಿ: ಆಂಜನೇಯ

ಚಿತ್ರದುರ್ಗ: ರಾಜ್ಯದ ಎರಡು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲುವು ಸಿದ್ದರಾಮಯ್ಯನವರ ಆಡಳಿತದ ಹಿರಿಮೆಗೆ ಬಹುದೊಡ್ಡ ಗರಿ ಆಗಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಹಾಗೂ ಮಾಜಿ ಸಚಿವ ಎಚ್.ಆಂಜನೇಯ ಹೇಳಿದ್ದಾರೆ.



ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಎಲ್ಲ ರಾಜಕೀಯ ಶತ್ರುಗಳು ಒಗ್ಗೂಡಿದ್ದರು. ಪಕ್ಷದಿಂದ ಉಚ್ಚಾಟಿಸಿದ್ದ ಯತ್ನಾಳ್ ಅವರನ್ನು ಬಿಜೆಪಿ ಪ್ರಚಾರಕ್ಕೆ ಕರೆತಂದಿತು. ಜಾತಿಗಳ ಮಧ್ಯೆ ಕಂದಕ ಹುಟ್ಟು ಹಾಕುವ ಕೆಲಸ ಮಾಡಿತು. ಆದರೆ, ಆ ಕ್ಷೇತ್ರದ ಮತದಾರರು ನಮ್ಮ ನಿರೀಕ್ಷೆಗೂ ಮೀರಿ ಕೈ ಅಭ್ಯರ್ಥಿಯನ್ನು ಹೆಚ್ಚು ಮತಗಳ ಅಂತರ ದಿಂದ ಗೆಲ್ಲಿಸಿದ್ದಾರೆ.ಆದೇ ರೀತಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಪಕ್ಷಕ್ಕೆ ನಿಷ್ಠವಾಗಿರುವ ಶಾಮನೂರು ಕುಟುಂಬದ ಕುಡಿ, ವಿದ್ಯಾ ವಂತ ಯುವಕ ಸಮರ್ಥನನ್ನು ಒಮ್ಮತದಿಂದ ಅಭ್ಯರ್ಥಿಯನ್ನಾಗಿಸಲಾಗಿತ್ತು. ಮುಸ್ಲಿಮರನ್ನು ಶತ್ರುಗಳಂತೆ ನೋಡುವ ಬಿಜೆಪಿ ನಾಯಕರು ಉರಿಯುವ ಮನೆಯಲ್ಲಿ ಗಳ ಹಿರಿಯುವ ರೀತಿ ಮುಸ್ಲಿಮರಿಗೆ ಟಿಕೆಟ್ ನೀಡದೆ ಕಾಂಗ್ರೆಸ್ ವಂಚಿಸಲಾಗಿದೆ ಎಂದು ದೂರಲು ಆರಂಭಿಸಿದರು. ಎಸ್‌ಡಿಎಫ್‌ಐ ಅಭ್ಯರ್ಥಿಗೆ ಬಿಜೆಪಿಗರು ಹಿಂಬಾಗಿ ಲಿನಿಅದ ಎಲ್ಲ ರೀತಿ ಸಹಕಾರ, ಬೆಂಬಲ ನೀಡುವ ಮೂಲಕ ಮತವಿಭಜನೆಗೆ ಪ್ರಯತ್ನ ನಡೆಸಿದರು. ಆದರೂ ಕಾಂಗ್ರೆಸ್ ಪಕ್ಷದ ಭದ್ರಕೋಟೆ ದಾವಣಗೆರೆ ದಕ್ಷಿಣ ಕ್ಷೇತ್ರದ ಮತದಾರರು ಅಂತಿಮವಾಗಿ ಪ್ರಜ್ಞಾವಂತಿಕೆ ಮೆರೆದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜೋಡಿ ಹಕ್ಕಿಗಳು | ಮೈಸೂರಿನ ಜೆಎಸ್‌ಎಸ್‌ನಲ್ಲಿ ಒಟ್ಟಿಗೆ ಅಧ್ಯಯನ | ಕುಟುಂಬ, ಸ್ನೇಹಿತರಿಂದ ಶುಭ ಹಾರೈಕೆ

ಮಾತು ಬಾರದ ಜೋಡಿಯ ವೈವಾಹಿಕ ಜೀವನ ಆರಂಭ

• **ಕನ್ನಡಪ್ರಭ ವಾರ್ತೆ** ಹೊಸದುರ್ಗ

ಮಾತಿಲ್ಲದ ಮೌನ್ ಕೇಳಿಸದ ಲೋಕ್ ಆದರೆ ಹೃದಯಗಳ ಸಂಭಾಷಣೆ ಮಾತ್ರ ಅನಂತ. ಇಂತಹಅಪರೂಪದಭಾವನೆಗಳಿಗೆಸಾಕ್ಷಿಯಾಗಿ, ಹುಟ್ಟಿನಿಂದಲೇಮಾತುಬಾರದಹಾಗೂಶ್ರವಣ ದೋಷಹೊಂದಿರುವಯುವಜೋಡಿಯೊಂದು ಗುರು ಹಿರಿಯರು, ಬಂಧು ಮಿತ್ರರ ಸಮ್ಮುಖದಲ್ಲಿ ಸೋಮವಾರ ಸಪ್ತಪದಿ ತುಳಿದು ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ಹೊಸದುರ್ಗ ತಾಲೂಕಿನ ಹಳೇಮಳಲಿ ಗ್ರಾಮದಕೃಷಿಕರಾದಶೋಭಾಹಾಗೂಪ್ರಕಾಶ ಅವರ ಪುತ್ರಿ ಸಂಗೀತಾ ಪಿ (ಯಶಸ್ವಿನಿ) ಹಾಗೂ ಕಡೂರು ತಾಲೂಕಿನ ಕಾಮನಕರೆ ಗ್ರಾಮದ ಕೃಷಿಕರಾದ ಕೋಮಲಾ ಶಿವಲಿಂಗಪ್ಪ ಅವರ ಪುತ್ರ ಕೆ.ಎಸ್.ಅವಿನಾಶ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನೂತನ ಮೌನ ಜೋಡಿಗಳು.

ಸಂಗೀತಾ ಮತ್ತು ಅವಿನಾಶ್ ಮೈಸೂರಿನ ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಒಟ್ಟಿಗೆ ಓದಿದ್ದು, ಕಳೆದ ಎರಡು ವರ್ಷಗಳಿಂದ ಪರಸ್ಪರರ ಮನೆಯಲ್ಲಿ ವಿವಾಹಕ್ಕೆ ವಧು ವರರನ್ನು ಹುಡುಕುತ್ತಿದ್ದರು.



ಮಾತು ಬಾರದ ಹಾಗೂ ಶ್ರವಣ ದೋಷ ಹೊಂದಿರುವ ಯುವ ಜೋಡಿಯೊಂದು ಗುರು ಹಿರಿಯರು, ಬಂಧು ಮಿತ್ರರ ಸಮ್ಮುಖದಲ್ಲಿ ಸೋಮವಾರ ಸಪ್ತಪದಿ ತುಳಿದು ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ಮೂರ್ನಾಲ್ಕುಸಂಬಂಧಗಳುಹುಡುಕಿಕೊಂಡು ಬಂದಿ ದ್ದರು ಒಪ್ಪಿಗೆ ಆಗಿರಲಿಲ್ಲ. ಈ ನಡುವೆ ಇಬ್ಬರಿಗೂ ಮೊದಲೇ ಪರಿಚಯ ಇದ್ದುದ್ದರಿಂದ ಮನೆಯವರ ಒಪ್ಪಿಗೆ ಮೂಲಕ ವಿವಾಹ ಕಾರ್ಯ ನೆರವೇರಿಸಲಾಗಿದೆ. ಇದು ಅರೇಂಜ್ ಮ್ಯಾರೇಜ್ ಎಂದು ಸಂಗೀತಾ ಅವರ ತಂದೆ ಪ್ರಕಾಶ್ ಹೇಳಿದರು.

